ಕವಿತೆ

# ನೀನು ಸಿಗುತ್ತೀಯ ದರಚೀಟಿಯಂತೆ

ಖರೀದಿಸದೆ ಬಿಟ್ಟ ಬಟ್ಟೆಯೊಳಗೆ ಸಿಕ್ಕಿಕೊಂಡು
ನೇತಾಡುವ ಈ ಗೊಂಬೆ ಸೊಂಟದಲ್ಲಿ
ಹಸಿವಿಗೆ ಚಡಪಡಿಸಿ ಕಾಗದವ ಜಗಿದು
ಹೊಟ್ಟೆ ಉಬ್ಬಿಸಿಕೊಂಡ ಆಕಳ ಜೋಡುಗಣ್ಣಲ್ಲಿ
ನಿನ್ನ ಹುಡುಕುತ್ತೇನೆ
ಸಿಕ್ಕ ಎಂಟಾಣೆಯ ಮೇಲೆ; ಚಲಿಸುವ ರೈಲಿನಲ್ಲಿ
ಪಾಚಿಗಟ್ಟಿರುವ ಗೋಡೆಗಂಟಿದ ಓ ಹಕ್ಕಿ ಮರಿಯೆ

ಘರ್‌ವಾಲಿಯ ಎಲೆಯಡಿಕೆಯಲ್ಲಿ
ಸುಲ್ತಾನಳ ಸುಸ್ತಾದ ಕಿರುಗೆಜ್ಜೆಯಲ್ಲಿ
ಬೋಳಾದ ಉದ್ಯಾನದಲಿ ಖಾಲಿ ಥೇಟರಿನಲಿ
ಹೀಗೆ ಹುಡುಕುತ್ತೇನೆ ಎಲ್ಲೆಂದರಲ್ಲಿ
ಮುನಿಸಿಕೊಂಡವಳೆ ನಿನ್ನ ಮುನಿಸಿಗಾಗಿ

ಕರಗುವ ರಾತ್ರಿಯಾಗಿ ಒರಗಿದ ಹಗಲಿನಂತೆ
ಇಲ್ಲಿ ಈ ಶಹರಿನ ಎದೆ ಮೇಲೆ
ನನ್ನ ಹಿಮ್ಮಡಿಯಲಿ ನಿಂತು
ಉಮ್ಮಳಿಸುವ ಒಂಟಿತನದಲಿ ಹುಡುಕತ್ತೇನೆ
ನಿನ್ನ ಎದೆ ತೊಟ್ಟಿಗೆ ಕಾದಿರುವ ಹಸುಳೆಯಂತೆ

ತೊಟ್ಟಿಕ್ಕುವ ತೂಗು ಸೇತುವೆ ಕೆಳಗೆ
ಎಲೆರಂಗಿನ ಹುಡುಗಿಯರು ಗುಲಾಬಿ ಹಿಡಿದು
ಆಕಾಶಕ್ಕೆ ಮುಡಿಸುವಾಗ, ಬೀದಿನಾಯಿಯಂತೆ
ನಿನ್ನ ಹುಡುಕುತ್ತೇನೆ
ಜಡೆಗೇರಿದ ದಂಡೆಯಲಿ; ಜಾವದ ಮಂಡಿಯಲಿ
ಪಹರ್ ಗಂಜಿನ ಫಕೀರನಂತೆ ನವಿಲುಗರಿ ಹಿಡಿದು
ಕೇಳಿಸಬಹುದೆಂಬ ನಿನ್ನ ದನಿಗಾಗಿ,
ಉದುರುವ ತರಗೆಲೆಯ ಸಪ್ಪಳದಂತೆ
ಮೈಮುರಿದ ಚೆಕ್ಕಿನ ತುಪ್ಪಳದಂತೆ
ಅಮವಾಸ್ಯೆಯ ಮಾಡಿನಲಿ; ನಕ್ಷತ್ರದ ಸೂಡಿನಲಿ
ಸದ್ದಾಗಿ, ಸಂದಾಗಿ ಕಳಚಿದ ದರ ಚೀಟಿಯಂತೆ
ನನ್ನ ಗುರುತಿಸಲು
ಒಬ್ಬ ತಲೆಹಿಡುಕನಂತೆ ಒಬ್ಬ ಪ್ರೇಮಿಯಂತೆ!



● **ರಮೇಶ ಅರೋಲಿ**